ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 123 ಎಂವಿವಿ 2007

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:12-11-2007.

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬೆಂಗಳೂರು-560 001.

ಇವರಿಗೆ:

ಕುಲಸಚಿವರು,
ಗುಲಬರ್ಗ ವಿಶ್ವವಿದ್ಯಾಲಯ,
ಗುಲಬರ್ಗ-585 106.

ಮಾನ್ಯರೆ,

ವಿಷಯ: 2007-08ನೇ ಶೈಕ್ಷಣಿಕ ಸಾಲಿಗೆ ರಾಯಚೂರು ಜಿಲ್ಲೆಯ ಈಚನಾಳದ ಶ್ರೀ ಶೈಲ ಮಲ್ಲಿಕಾರ್ಜುನ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ರಾಯಚೂರು ಜಿಲ್ಲೆಯ ಲಿಂಗಸುಗೂರಿನಲ್ಲಿ ಪ್ರಾರಂಭಿಸಲಿರುವ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಶಿಕ್ಷಣ ಮಹಾವಿದ್ಯಾಲಯಕ್ಕೆ ಸಂಯೋಜನೆ.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ: ಇಡಿ 328 ಯುಎನ್‌ಇ 2005, ದಿನಾಂಕ:30-12-2005

(2) NCTEಯ ಪ್ರಾದೇಶಿಕ ನಿರ್ದೇಶಕರ ಪತ್ರ ಸಂಖ್ಯೆ: F.SRO/ NCTE/ 2007-08/13834, ದಿನಾಂಕ:31-10-2007.

(3) ಸರ್ಕಾರಿ ಪತ್ರ ಸಂ. ಇಡಿ 07 ಎಂವಿವಿ 2006, ದಿ:30-12-2006.

(4) ರಾಯಚೂರು ಜಿಲ್ಲೆಯ ಶ್ರೀ ಶೈಲ ಮಲ್ಲಿಕಾರ್ಜುನ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರ ಪತ್ರ ದಿ:13-10-2007.

*****

1) **ರಾಯಚೂರು ಜಿಲ್ಲೆಯ ಈಚನಾಳದ ಶ್ರೀ ಶೈಲ ಮಲ್ಲಿಕಾರ್ಜುನ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ರಾಯಚೂರು ಜಿಲ್ಲೆಯ ಲಿಂಗಸುಗೂರಿನಲ್ಲಿ ಪ್ರಾರಂಭಿಸಲಿರುವ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಶಿಕ್ಷಣ ಮಹಾವಿದ್ಯಾಲಯದ ಬಿ.ಎಡ್. ಕೋರ್ಸಿಗೆ 2007-08ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ** ಸಂಯೋಜನೆಗಾಗಿ **ಗುಲಬರ್ಗ ವಿಶ್ವವಿದ್ಯಾಲಯಕ್ಕೆ** ಸಲ್ಲಿಸಿದ ಅರ್ಜಿಯನ್ನು ಹಾಗೂ **ಗುಲಬರ್ಗ ವಿಶ್ವವಿದ್ಯಾಲಯದ** ಶಿಫಾರಸ್ಸನ್ನು ಮತ್ತು ಎನ್‌ಸಿಟಿಇಯು ನೀಡಿರುವ ಮಾನ್ಯತೆಯನ್ನು ಆಧರಿಸಿ 2007-08ನೇ ಶೈಕ್ಷಣಿಕ ಸಾಲಿನಿಂದ ಮೇಲ್ಕಂಡ ಕಾಲೇಜಿಗೆ ಸಂಯೋಜನೆ ಮಂಜೂರು ಮಾಡುವ ವಿಚಾರವನ್ನು ಸಂವೀಕ್ಷಿಸಲಾಗಿದೆ.

2) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ದ 59(11)ನೇ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲ್ಕಂಡ ಕಾಲೇಜಿನಲ್ಲಿ **ಬಿ.ಎಡ್ ಕೋರ್ಸನ್ನು 100 (ನೂರು)** ವಿದ್ಯಾರ್ಥಿ ಪ್ರಮಾಣದೊಂದಿಗೆ 2007-08ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸಂಯೋಜನೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಲು ನಾನು ನಿರ್ದೇಶಿತನಾಗಿದ್ದೇನೆ.

...ಮುಂದುವರೆದಿದೆ...

ಷರತ್ತುಗಳು:-

(1) ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಕಾಲೇಜಿನ **ಬಿ.ಎಡ್. ಕೋರ್ಸಿಗೆ** ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದು ಶಾಶ್ವತ ಅನುದಾನರಹಿತ ಕೋರ್ಸೆಂದು ಪರಿಗಣಿಸತಕ್ಕದ್ದು.

(2) ಶಾಶ್ವತ ಅನುದಾನರಹಿತ ಷರತ್ತಿಗೆ ಒಳಪಡಲು ಕಾಲೇಜಿನಿಂದ ಮಧ್ಯಂತರ ಒಪ್ಪಂದದ ಪತ್ರವನ್ನು ಮತ್ತು ಗೊತ್ತುವಳಿಯನ್ನು ವಿಶ್ವವಿದ್ಯಾಲಯವು ಪಡೆಯತಕ್ಕದ್ದು ಹಾಗೂ ವಿದ್ಯಾಸಂಸ್ಥೆಯು ಒಪ್ಪಂದದಲ್ಲಿನ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

(3) ಮೇಲ್ಕಂಡ ಕಾಲೇಜು ಎನ್‌ಸಿಟಿಇಯ ಅಧಿನಿಯಮ ಮತ್ತು ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;

(4) ನಿಗಧಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ.

(5) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

(6) ಸ್ಥಳೀಯ ವಿಚಾರಣಾ ಸಮಿತಿ ಹಾಗೂ ಎನ್‌ಸಿಟಿಇಯು ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

**3)** ಎಂಟು ದಿನಗಳೊಳಗಾಗಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

ತಮ್ಮ ನಂಬುಗೆಯ,

**(ಯು.ಬಿ. ಉಳವಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ).

**ಪ್ರತಿ ಇವರಿಗೆ:**

(1) ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು-560 001.
(2) ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರು, ಗುಲಬರ್ಗಾ.
(3) ಅಧ್ಯಕ್ಷರು, ಶ್ರೀ ಶೈಲ ಮಲ್ಲಿಕಾರ್ಜುನ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಈಚನಾಳ, ಹೌಸಿಂಗ್ ಬೋರ್ಡ್ ಕಾಲೋನಿ, ಲಿಂಗಸುಗೂರ್-584 122, ರಾಯಚೂರು ಜಿಲ್ಲೆ.